ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 1

(ದಿನಾಂಕ 31-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ನಾನು ವರದಾಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ತಾಯಿ ಸಹಾ ವರದಾಪುರ ಗ್ರಾಮದಲ್ಲಿ ವಾಸವಾಗಿರುತ್ತಾರೆ. ವರದಾಪುರದಿಂದ ಚಿಲಗೋಡು ಗ್ರಾಮ ಸುಮಾರು 25 ಕಿ ಮೀ ಅಂತರದಲ್ಲಿರಬಹುದು. ಪ್ರತಿವಾದಿ ಜಮೀನಿನ ಪೂರ್ವಕ್ಕೆ ವಾರದ ಕೊಟ್ರೇಶಿ ಮತ್ತು ಉಗ್ಗಣ್ಣನವರ ಮೈಲಮ್ಮರ ಸ್ವತ್ತು ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಗಬ್ಬೂರು ಕೊಟ್ರೇಶ ಮತ್ತು ಸಬಟಿ ಕರಿಯವ್ವ ಇವರ ಜಮೀನು ಇರುತ್ತದೆಂದರೆ ಸರಿಯಲ್ಲ. ಉತ್ತರಕ್ಕೆ ಕರಿಯಮ್ಮ ದೇವಸ್ಥಾನದ ದಾರಿ ಮತ್ತು ಜಾಲಿ ಇದೆ ಎಂದರೆ ಸರಿಯಲ್ಲ ಅದರ ಪಕ್ಕಕ್ಕೆ ಉಗ್ಗಣ್ಣನವರ ಮೈಲಮ್ಮ ಇವರ ಜಾಗ ಇದೆ ಎಂದರೆ ಸರಿಯಲ್ಲ. ದಕ್ಷಿಣ ದಿಕ್ಕಿಗೆ ವಾರದ ನಿಂಗಪ್ಪ ಮತ್ತು ಹುಲ್ಮನಿ ಮಂಜಪ್ಪ ಇವರ ಜಮೀನು ಇರುತ್ತದೆಂದರೆ ಸರಿ.

ಸರ್ವೆ ನಂ. 107 ಸಿ ಒಟ್ಟು 3 ಎಕರೆ 40 ಸೆಂಟ್ಸ ಇರುತ್ತದೆ. ನಿಪಿ-3 ರ ದಾಖಲೆಯಲ್ಲಿ ಚಕ್ಕುಬಂದಿ ಇರುವುದಿಲ್ಲವೆಂದರೆ ಸರಿಯಲ್ಲ. ಈ ದಾವೆ ದಾಖಲಿಸುವವರೆಗೂ ಸೆಟ್ಲಮೆಂಟ್ ಡೀಡ್ ಆಧಾರದ ಮೇಲೆ ನೀವಾಗಲೀ, ನಿಮ್ಮ ತಾಯಿಯಾಗಲೀ ಖಾತೆ ಬದಲಾವಣೆ ಮಾಡಿಕೊಳ್ಳುವ ಕುರಿತು ತಹಶೀಲ್ದಾರ್ ರವರಿಗೆ ಅರ್ಜಿ ಏನಾದರೂ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ. ಸದರಿ ಅರ್ಜಿಯ ಮೇಲೆ ಏನು ಆದೇಶವಾಯಿತು ಎಂದರೆ ಸಾಕ್ಷಿಯು ಅದು ಟೈಂ ಮುಗಿದಿದೆ ಎನ್ನುತ್ತಾರೆಂದು ನುಡಿಯುತ್ತಾರೆ. ಸದರಿ ಹೇಳಿಕೆಯ ಮೇಲೆ ನೀವು ಏ ಸಿ ಯವರಲ್ಲಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಅಲ್ಲಿಯೂ ಸಹಾ ಅವಧಿ ಮುಗಿದಿದೆ ಎಂದು ತಿಳಿಸಿದರು ಎನ್ನುತ್ತಾರೆ. ನೀವು ಯಾವುದೇ ಅರ್ಜಿ ಸಲ್ಲಿಸಿಲ್ಲವೆಂದರೆ ಸರಿಯಲ್ಲ.

ಪ್ರತಿವಾದಿಯ ಹೆಸರಿಗೆ ಯಾವ ವರ್ಷ ಆಯಿತು ಎಂದರೆ ನನಗೆ ಗೊತ್ತಿಲ್ಲ, ಆದರೆ ಅವರು ನಮಗೆ ಮೋಸ ಮಾಡಿ ಮಾಡಿಕೊಂಡಿದ್ದಾರೆ. ಮ್ಯುಟೇಶನ್ ಆದ ನಂತರ ನಾನು ಈ ದಾವೆಯನ್ನು ದಾಖಲಿಸಿದ್ದೇನೆ. ಸದರಿ ಮ್ಯುಟೇಶನ್ ನ್ನು ನೀವು ಕಂದಾಯ ನ್ಯಾಯಾಲಂಯದಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿಯು ನಾನು ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿದ್ದೇನೆ ಎನ್ನುತ್ತಾರೆ. ಏ ಸಿ ನ್ಯಾಯಾಲಯದಲ್ಲಿ ನಿಮಗೆ ಮೇಲ್ಮನವಿ ಸಲ್ಲಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಇಲ್ಲ. ಹನುಮವ್ವ ಇವರಿಗೆ ಆಸ್ತಿಯು ಅವರ ಗಂಡ ಸಣ್ಣಕರಿಯಪ್ಪನಿಂದ ಬಂತು. ಆ ಕುರಿತು ನ್ಯಾಯಾಲಯಕ್ಕೆ ನಾನು ದಾಖಲೆ ಹಾಜರು

ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 1

ಮಾಡಿದ್ದೇನೆ. ನಾನು ಯಾವುದೇ ದಾಖಲೆ ಹಾಜರುಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯು ಬೇರೆ ಬೇರೆಯವರಿಗೆ ಮಾರಾಟವಾಗಿದೆ ಅವರನ್ನು ಏನಾದರೂ ದಾವೆಯಲ್ಲಿ ಪಕ್ಷಗಾರರಂತಾ ಸೇರಿಸಿದ್ದೀರಾ ಎಂದರೆ ಸುಳ್ಳು. ನಾನು ಮತ್ತು ಪ್ರತಿವಾದಿ ಸಂಬಂಧಿಕರಲ್ಲವೆಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿದಂತೆ ಉಗ್ಗಣ್ಣನವರ ಹುಲುಗಪ್ಪ ಇವರು ಪ್ರತಿವಾದಿ ಹೆಸರಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿಯು ಸಂಬಂಧವಿಲ್ಲ ಎನ್ನುತ್ತಾರೆ. ಅದರಂತೆ ಅವರ ಹೆಸರಿಗೆ ಮ್ಯುಟೇಶನ್ ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾಸ್ತಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಮತ್ತು ಕಂದಾಯ ಸಹಾ ಅವರೇ ಕಟ್ಟುತ್ತಾರೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ನಾನು ದಾವಾಸ್ತಿಯ ಸ್ವಾಧೀನದಲ್ಲಿರುತ್ತೇನಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೇನೆ. ಸದರಿ ದಾಖಲೆಯು ನಮ್ಮ ತಾಯಿಯ ಹೆಸರಿನಿಂದ ಆದ ದಾಖಲೆಯಾಗಿರುತ್ತದೆ. ಸದರಿ ದಾಖಲೆಯಾಧಾರದ ಮೇಲೆ ಯಾವುದೇ ಮ್ಯುಟೇಶನ್ ಆಗಿಲ್ಲವೆಂದರೆ ಸರಿಯಲ್ಲ.

ಪ್ರತಿವಾದಿಯು ಯಾವ ದಿನಾಂಕದಂದು ನಿಮ್ಮ ಸ್ವಾಧೀನಕ್ಕೆ ಅಡ್ಡಿಪಡಿದ ಎಂದರೆ ಸಾಕ್ಷಿಯು 2017 ರಲ್ಲಿ ನಮಗೆ ತೊಂದರೆ ಕೊಟ್ಟರು ಎನ್ನುತ್ತಾರೆ. ಆ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿಲ್ಲ. ನಾನು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲ ಈ ದಾವೆ ದಾಖಲಿಸುವ ಕುರಿತು ಸಂಗತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯರು ದಾವಾಸ್ತಿಯ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

(2 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆದರೆ 2 ನೇ ಪ್ರತಿವಾದಿಯು ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ್ದರಿಂದ ಪಾಟೀ ಸವಾಲು ಏನೂ ಇಲ್ಲವೆಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ